**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ: ಸಿ8(5) ಪಾಶಿಲು ಸುತ್ತೋಲೆ 131/2002-03 ದಿನಾಂಕ:20-02-2003.

## ಸುತ್ತೋಲೆ

ವಿಷಯ: ಖಾಸಗಿ ಶಾಲಾ ಆಡಳಿತ ಮಂಡಳಿಗಳಿಗೆ ಸರ್ಕಾರಿ ಅಧಿಕಾರಿಗಳನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದು ಈ ಅಧಿಕಾರಾವಧಿಯಲ್ಲಿ ನೇಮಕಾತಿಗಳನ್ನು ಮಾಡುವ ಬಗ್ಗೆ ಸೂಚನೆಗಳ ಬಗ್ಗೆ

* * *

ರಾಜ್ಯದಲ್ಲಿನ ಅನೇಕ ಆಡಳಿತ ಮಂಡಳಿಗಳು ಹಲವಾರು ಅನುದಾನಿತ ಶಾಲೆಗಳನ್ನು ನಡೆಸುತ್ತಿದ್ದ ಕೆಲವು ಆಡಳಿತ ಮಂಡಳಿಗಳಲ್ಲಿ ವಿವಾದ ಇದ್ದು ಶಾಲಾ ಚಟುವಟಿಕೆಗಳು ಸುಸೂತ್ರವಾಗಿ ನಡೆಯುವ ಉದ್ದೇಶಕ್ಕಾಗಿ ಇಂಥಹ ವಿವಾದಿತ ಆಡಳಿತ ಮಂಡಳಿಗಳಿಗೆ ಸರ್ಕಾರ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿರುತ್ತದೆ. ಕೆಲವು ಆಡಳಿತಾಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪ್ರಮುಖ ವಿಚಾರಗಳ ಬಗ್ಗೆ ಅಂದರೆ ನೇಮಕಾತಿ ಮಾಡುವುದು, ಬಡ್ತಿ ನೀಡುವುದು ಮುಂತಾದವುಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಕಾರಣ ತಮಗೆ ಆ ಅಧಿಕಾರ ಇಲ್ಲವೆಂದು ತಿಳಿಸುತ್ತಿದ್ದಾರೆ. ಕೆಲವು ಆಡಳಿತ ಮಂಡಳಿಗಳಿಗೆ ವಿವಾದಿತ ಅವಧಿಯಲ್ಲಿ ಶಾಲಾ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆ ಆಗ ಬಾರದೆಂಬ ಉದ್ದೇಶಕ್ಕೆ ಸರ್ಕಾರ ಆಡಳಿತಾಧಿಕಾರಿಗಳನ್ನು ನೇಮಿಸುತ್ತದೆ. ಈ ರೀತಿ ನೇಮಕಗೊಂಡ ಆಡಳಿತಾಧಿಕಾರಿಗಳು ಸಂಬಂಧಿಸಿದ ಆಡಳಿತ ಮಂಡಳಿಯು ಚಲಾಯಿಸುತ್ತಿದ್ದ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು ಅಧಿಕಾರವುಳ್ಳವರಾಗಿರುತ್ತಾರೆ. ಆ ಆಡಳಿತ ಮಂಡಳಿ ಆಶ್ರಯದಲ್ಲಿ ನಡೆಯುವ ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡುವುದು, ಶಿಕ್ಷಕರಿಗೆ ಬಡ್ತಿ ನೀಡುವುದು. ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡುವುದು ಹಾಗೂ ತಪ್ಪಿತಸ್ಥ ಶಿಕ್ಷಕರ ವಿರುದ್ಧ ಕ್ರಮ ತೆಗೆದುಕೊಳ್ಳುವ ದಂಡನಾಧಿಕಾರಿಗಳಾಗಿಯೂ ಕರ್ತವ್ಯ ನಿರ್ವಹಿಸುವ ಅಧಿಕಾರವುಳ್ಳವರಾಗಿರುತ್ತಾರೆ. ಹೀಗಿದ್ದೂ ಅನೇಕ ಆಡಳಿತಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳದೇ ಶೈಕ್ಷಣಿಕ ಪ್ರಗತಿ ಕುಂಠಿತವಾಗಲು ಕಾರಣರಾಗಿರುತ್ತಾರೆ. ಇದು ಸರ್ಕಾರ ಆಡಳಿತಾಧಿಕಾರಿಗಳನ್ನು ನೇಮಿಸುವ ಮೂಲ ಉದ್ದೇಶವೇ ವಿಫಲವಾಗಲು ಕಾರಣವಾಗುತ್ತದೆ. ಪ್ರಯುಕ್ತ ಇನ್ನು ಮುಂದೆ ವಿವಾದಿತ ಆಡಳಿತ ಮಂಡಳಿಗಳಿಗೆ ಆಡಳಿತಾಧಿಕಾರಿಗಳಾಗಿ ನೇಮಕಗೊಳ್ಳುವ ಮತ್ತು ಈಗಾಗಲೇ ನೇಮಕಗೊಂಡಿರುವ ಎಲ್ಲಾ ಆಡಳಿತಾಧಿಕಾರಿಗಳೂ ಸಹ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳಿಗೆ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಸರ್ಕಾರಿ ನಿಯಮಗಳು ಮತ್ತು ಆದೇಶಗಳ ಪ್ರಕಾರ ನೇಮಕಾತಿ ಪ್ರಕ್ರಿಯೆ ನಡೆಸುವ ಅಧಿಕಾರವನ್ನು ಉಳ್ಳವರಾಗಿದ್ದು, ನೇಮಕಾತಿಗಳನ್ನು ನಿಯಮಾನುಸಾರ ಮಾಡುವಂತೆ ಸೂಚಿಸಿದೆ. ನೇಮಕಾತಿಗಳನ್ನು ಈ ಕೆಳಕಂಡ ಸೂಚನೆಗಳ ಪ್ರಕಾರ ಮಾಡುವಂತೆ ತಿಳಿಸಿದೆ.

1. ಆಡಳಿತಾಧಿಕಾರಿಗಳು ಸರ್ಕಾರಿ ಅಧಿಕಾರಿಗಳಾಗಿರುವುದರಿಂದ ಅವರ ವ್ಯಾಪ್ತಿಯಲ್ಲಿನ ಅನುದಾನಿತ ಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ನಿಯಮಗಳ ಪ್ರಕಾರ ಅಗತ್ಯತೆಯ ಆಧಾರದ ಮೇಲೆ ಗುರ್ತಿಸಬೇಕು.
2. ಗುರ್ತಿಸಿದ ಅಗತ್ಯವಿರುವ ಹುದ್ದೆಗಳನ್ನು ವಿಷಯವಾರು ಮತ್ತು ಶಾಲಾವಾರು ಪಟ್ಟಿ ಮಾಡಿ ಈ ಖಾಲಿ ಹುದ್ದೆಗಳಿಗೆ ಮೀಸಲಾತಿ ನಿಗಧಿಪಡಿಸಿ ಪಟ್ಟಿ ತಯಾರಿಸಬೇಕು. (ದಿನಾಂಕ:20-06-1995ರ ಮೀಸಲಾತಿ ಆದೇಶದ ಪ್ರಕಾರ).
3. ಈ ರೀತಿ ತಯಾರಿಸಿದ ಖಾಲಿ ಹುದ್ದೆಗಳ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರಿಗಳಿಗೆ ಕಳಿಸಿ ಹುದ್ದೆ ತುಂಬಲು ಇಲಾಖಾ ಪೂರ್ವಾನುಮತಿ ಪಡೆಯಬಹುದು.
4. ಇಲಾಖಾ ಪೂರ್ವಾನುಮತಿ ಪಡೆದ ಹುದ್ದೆಗಳನ್ನು ಆ ಪ್ರಕಾರವೇ ಮೀಸಲಾತಿ ವಿದ್ಯಾರ್ಹತೆ, ಮುಂತಾದ ವಿವರಗಳೊಂದಿಗೆ ಪತ್ರಿಕಾ ಪ್ರಕಟಣೆ ನೀಡುವುದು ಮತ್ತು ಅರ್ಜಿ ಸಲ್ಲಿಸಲು 21 ದಿನಗಳ ಕನಿಷ್ಠ ಕಾಲಾವಕಾಶ ನೀಡುವುದು.
5. ಪತ್ರಿಕಾ ಪ್ರಕಟಣೆ ಪ್ರಕಾರ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಅಭ್ಯರ್ಥಿಗಳ ಮೀಸಲಾತಿ ಪ್ರವರ್ಗಗಳ ಪ್ರಕಾರ ಅವರು ಅರ್ಹತಾ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಪಟ್ಟಿ ತಯಾರಿಸುವುದು. ಉಪನಿರ್ದೇಶಕರು ಮತ್ತು

ಸಹನಿರ್ದೇಶಕರ ಹಂತದಲ್ಲಿ ಸರ್ಕಾರಿ ಶಿಕ್ಷಕರ ನೇಮಕಾತಿಯಲ್ಲಿ ಅಭ್ಯರ್ಥಿಗಳ ಮೆರಿಟ್ ಲಿಸ್ಟ್ ತಯಾರಿಸುವ ರೀತಿಯಲ್ಲಿಯೇ ತಯಾರಿಸಬೇಕು.

6. ಅಪೀಲಾಧಿಕಾರಿಗಳು, ಸರ್ಕಾರಿ ಅಧಿಕಾರಿ ಆಗಿರುವುದರಿಂದ ಮತ್ತು ಅಪೀಲ ಮಂಡಳಿ ವಿವಾದದಲ್ಲಿರುವ ಅದು ಅಸ್ತಿತ್ವದಲ್ಲಿಲ್ಲದ ಕಾರಣ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಯಾವುದೇ ಸೂಚನೆಗಳನ್ನು ಹೊರಡಿಸಲು ಅವಕಾಶ ಇರುವುದಿಲ್ಲ. ಶಿಕ್ಷಕರ ನೇಮಕಾತಿ ನಿಯಮಗಳ ಪ್ರಕಾರವೇ ನೇಮಕಾತಿ ನಡೆಸಬೇಕು

7. ಆಯಾ ಪ್ರವರ್ಗಕ್ಕೆ ಮೀಸಲಾದ ಹುದ್ದೆಗಳಿಗೆ ಆಯಾ ಪ್ರವರ್ಗದಲ್ಲಿ ಅತೀ ಹೆಚ್ಚಿನ ಅಂಕ ಪಡೆದ ಅಭ್ಯರ್ಥಿಗಳನ್ನು ಮಾತ್ರವೇ ಆಯ್ಕೆ ಮಾಡಿಕೊಳ್ಳುವುದು.

8. ಈ ರೀತಿ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡುವುದು. ಈ ಅವಧಿ ಮುಗಿದ ನಂತರ ಬಂದಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು ಮತ್ತು ಮರುದಿನವೇ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡುವುದು.

(ಸಹಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ಕಾರ್ಯದರ್ಶಿಗಳು ಹಾಗೂ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು ವಿಭಾಗ, ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗ
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ,
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು,
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.

ಪ್ರ. \\Type6\d\Est 2\20507_03.doc